ಮೊಳಕಾಲ್ಮೂರು ಸುರೇಶ್, ಬಳ್ಳಾರಿ
ನಿಮ್ಮ ಭವಿಷ್ಯವನ್ನು ತಿಳಿಯಲು ಇಂದೇ ಭೇಟಿ ನೀಡಿರಿ ಎಂಬ ಜಾಹೀರಾತುಗಳ ರಹಸ್ಯ?



ನೀವು ತಕ್ಷಣವೆ ಭೇಟಿ ನೀಡದಿದ್ದರೆ ಅವರ ಗ್ರಹಗತಿಗಳು ಕ್ರೂರವಾಗುವುವೆಂದು!

ಎಂ. ಆರ್. ಪವನ್‌ಕುಮಾರ್, ಬಳ್ಳಾರಿ
ಒಳ್ಳೆಯವರಲ್ಲಿ ಕೆಟ್ಟದ್ದನ್ನು ಹುಡುಕುವವರಿಗೂ, ಕೆಟ್ಟವರಲ್ಲಿ ಒಳ್ಳೆಯದನ್ನು ಹುಡುಕುವವರಿಗೂ ಏನು ವ್ಯತ್ಯಾಸ?
ಮೊದಲನೆಯದಕ್ಕೆ ಭಿನ್ನಮತವಿದ್ದರೆ ಸಾಕು, ಎರಡನೆಯದಕ್ಕೆ ರದ್ದಿ ಆಯುವವರ ಗುಣ ಬೇಕು!

ಹೆಚ್. ಆರ್. ಕಡಿವಾಲ, ಬಾದಾಮಿ
ನಿಮಗೆ ಯಾವ ಸರ್ಕಾರ ಇಷ್ಟ?
ಜಾದೂಗಾರರರಾದ ಪಿ.ಸಿ. ಸರ್ಕಾರ

ಪಿ.ಎಸ್. ಶ್ರೀವತ್ಸ, ಬೆಂಗಳೂರು
ಕ್ಯಾನ್ಸರ್; ಇದರ ನಿಜವಾದ ಅರ್ಥ?
ಕರ್ನಾಟಕದ ಇಂದಿನ ರಾಜಕೀಯ ಪರಿಸ್ಥಿತಿ!

ಪಂಕಜ, ಬೆಂಗಳೂರು
ಗರ್ಭಿಣಿಯರು ಅಳುವುದೇತಕ್ಕೆ?



ಮಗು ಹುಟ್ಟಿದಾಕ್ಷಣ ಅಳುವುದಕ್ಕೆ ಇಂಟರ್ನಲ್ ಟ್ರೈನಿಂಗ್ ನೀಡಲು!

ಆರ್. ಮಧುಸೂದನ್, ಹಾಸನ
ವಾಮಮಾರ್ಗದಿಂದ ಹೆಣ್ಣಿನ ಮನಸ್ಸು ಗೆಲ್ಲುವ ಹಾಗಿದ್ದಿದ್ದರೆ?
ಎಲ್ಲೆಡೆಯೂ ಶಾಕಿನಿ, ಡಾಕಿನಿಯರೇ ತುಂಬಿರುತ್ತಿದ್ದರು!

ಎಂ.ಎಸ್. ಸೋಮಶೇಖರ್, ಮೈಸೂರು
ದಶಾವತಾರಗಳಲ್ಲಿ ಸ್ತ್ರೀ ಅವತಾರ ಒಂದೂ ಇಲ್ಲವೇಕೆ?
ಎತ್ತಬೇಕಾದ ಅವತಾರಕ್ಕೆ ಅವಶ್ಯವಾದ ಮೇಕಪ್ ಸೆಟ್ ಇರಲಿಲ್ಲವಂತೆ!

ಸಣಬ ಮೃತ್ಯುಂಜಯ, ಪಾಂಡವಪುರ
ಮರಣ ಸನಿಹವಿದ್ದರೂ ಆಸೆ ಮಾನವನಿಗೆ; ಏಕೆ ಗುರು?
ಸತ್ತಮೇಲೆ ಆಸೆ ಪಡಲಾಗದ ಏಕೈಕ ಕಾರಣ!

ಕೆ. ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
ವಿದ್ಯಾರ್ಥಿಗಳಿಗೆ ಮಾದರಿಯಾಗಬೇಕಾದ ಶಿಕ್ಷಕರೇ ರಾಜಕಾರಣಿಗಳಾಗಿಬಿಟ್ಟಿದ್ದಾರಲ್ಲಾ... ಮುಂದೆ ಮಕ್ಕಳ ಗತಿ?
ಗುರಿ ಇಟ್ಟು ಕಲ್ಲುಹೊಡೆಯುವುದರಲ್ಲಿ ಪರಿಣಿತರಾಗಿ, ದೇಶಕ್ಕೆ ಗುರಿಯಿಡಬೇಕಾದ ಕ್ರೀಡೆಗಳಲ್ಲಿ ಮೆಡಲ್ ತರುವರಂತೆ!

ಸಾವಿತ್ರಮ್ಮ ಕೆ. ವಿಭೂತಿ, ಹರಿಹರ
ಹಣವಿಲ್ಲದ ಬುದ್ಧಿವಂತನ ಮಾತಿಗೆ ಬೆಲೆ ಬರುವುದು ಯಾವ ಕಾಲದಲ್ಲಿ?
ಆ ಮಾತುಗಳು ಪುಸ್ತಕವಾಗಿ, ಪುಸ್ತಕ ತೂಕಕ್ಕೆ ಹಾಕಿದಾಗ!

ರಾಂಕೊ, ತೀರ್ಥಹಳ್ಳಿ
ನಾಡು, ನುಡಿ, ಗುಡಿ, ಗಡಿ, ಗಣಿ ರಾಜಕಾರಣಿಗಳಿಗೆ ಪಂಚ ಮಂತ್ರವಂತೆ?
ಲಾಂಗು, ಮಚ್ಚು, ಬ್ಲ್ಯಾಕ್‌ಮೇಯ್ಲು, ರೆಸಾರ್ಟ್, ಗೂಳಿನೃತ್ಯಗಳನ್ನು ಬಿಟ್ಟಿರಲ್ಲಾ...!

ಎಂ. ಬಿ. ಖೋದಾನಪೂರ, ಸವದತ್ತಿ
ಹಣ್ಣು, ಹೆಣ್ಣು, ಹಣ ಮೂರೂ ಬೇಡವೆಂದು ಹೇಳುವವರು ಇರುವರೇ?
ಇಲ್ಲದೆ ಏನು! ಕನ್ನಡದ ಪೂಜಾರಿಗಳಾದ ಹಿರೇಮಗಳೂರು ಕಣ್ಣನ್!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಇತ್ತೀಚಿನ ದಿನಗಳಲ್ಲಿ ಯಾವ ದೇವರೂ ಯಾರಿಗೂ ಪ್ರತ್ಯಕ್ಷವಾಗುವುದಿಲ್ಲವಲ್ಲಾ, ಯಾಕೆ ಸಾರ್?
ಹಿಂದಿನಂತೆ ಈಗ ದೇಶಕ್ಕೆ ಸುಲಭವಾಗಿ ನುಗ್ಗಲಾಗದು; ವೀಸಾ ಪ್ರಾಬ್ಲಂ!

ಖಲಂದರ್ ಅಖ್ತೀರ್ಖ್, ಜಾವಗಲ್
ಭಾರತದ ಅತಿ ದೊಡ್ಡ ಸಮಸ್ಯೆ ಯಾವುದು ವೃಶ್ಚಿಕಾ?
ವೃಶ್ಚಿಕಾ ಕುಟುಕುವುದು ನಿಂತು, ಸಿಂಹ ನಾಡಿಗೆ ಸಾಗಿ, ರಾಮ್ ಬಂದಿದ್ದರೂ ಇನ್ನೂ ಗತಕಾಲದ ವೈಭವದಲ್ಲೇ ಜೀವಿಸುವುದು!

## ಬಹುಮಾನಿತ ಪ್ರಶ್ನೆ

ವಿದ್ಯಾ ಎಸ್. ಪೈ, ಹೊನ್ನಾವರ
ಊರು ಬಿಟ್ಟ ಹೊರತು ಉದ್ಧಾರ ಆಗಲ್ಲ ಎನ್ನುತ್ತಾರೆ; ಏಕೆ?
ಉದ್ಧಾರ ಇವರದ್ದಲ್ಲ, ಊರಿನದು; ಇವರು ಬಿಟ್ಟರೆ ಅದು ಉದ್ಧಾರವಂತೆ!

ಎ.ಎಸ್. ಸ್ವಾಮಿ, ಶೋರಾಪೂರ
ಸ್ಥಿತಪ್ರಜ್ಞಾ ಎಂದರೆ?
ತಿಳುವಳಿಕೆ ನಿಂತಲ್ಲಿಯೇ ನಿಂತಿರುವುದು ಎಂದು ತಲೆ ಓಡದವನು!

ಮಹೇಶ್ ಹೆಗಡೆ, ಹೆಗ್ಗೆ
ಹುಡುಗರ ಹಾರ್ಟಲ್ಲಿ ಆಟ ಆಡೋದು ಹುಡುಗಿಯರ ಹಾಬೀನಾ?



ಅವರೇಕೆ ಜಾಗ ಕೊಡಬೇಕು? ನೋ ಎಂಟ್ರಿ ಫಾರ್ ಹುಡುಗೀಸ್ ಎಂದು ಹಾರ್ಟಿಗೊಂದು ಬೋರ್ಡ್ ಹಾಕಿಕೊಳ್ಳಬೇಕಪ್ಪ!

ಗಾಯತ್ರಿ, ಬೆಂಗಳೂರು
ಶ್ರೀರಾಮುಲು ಬಳ್ಳಾರಿಗೆ ದೃಷ್ಟಿಬೊಟ್ಟಾದರೆ ಕರ್ನಾಟಕಕ್ಕೆ ದೃಷ್ಟಿಬೊಟ್ಟು ಯಾರು?
ಯಡ್ಡಿ! ಆದರೆ ದೃಷ್ಟಿಬೊಟ್ಟಲ್ಲ, ದೃಷ್ಟಿಬೊಂಬೆ;

ಎಸ್.ಜಿ. ಕರನಂದಿ, ಹುನಗುಂದ
ಗಾಂಧೀಜಿ, ಶಾಸ್ತ್ರೀಜಿಯಂತಹ ಸಜ್ಜನಿಕೆಯ ಸತ್ಪುರುಷರು ಈಗ ಎಲ್ಲಿದ್ದಾರೆ?
ಮಕ್ಕಳ ಪಠ್ಯ ಪುಸ್ತಕಗಳಲ್ಲಿ!

ಅಮರಯ್ಯ ಪತ್ರಿಮಠ, ಸುರಪುರ
ಸತ್ಯವಂತರಿಗಿದು ಕಾಲವಲ್ಲವಂತೇ...?
ಪಾಪ! ಅವರಿಗೆ ಅನುಗಾಲವೂ ಅಕಾಲ!

ಮಹಾವೀರ ಕಾಸಾರ, ಚನ್ನಗಿರಿ
ಸಕಲ ಜೀವಿಗಳಿಗೆ ಲೇಸನ್ನು ಬಯಸುವ ಧರ್ಮ ಯಾವುದು?
lays ಚಿಪ್ಸ್ ಕಂಪನಿಯ ಮಾಲಿಕನದು!

■ ರಾಮ್